ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1273
ಮಾನ್ಯ ಸದಸ್ಯರ ಹೆಸರು	ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	17.03.2021
ಉತ್ತರಿಸುವ ಸಚಿವರು	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಗೃಹ ಮಂಡಳಿಯಿಂದ ದುರ್ಬಲ ವರ್ಗದವರಿಗೆ ನಿವೇಶನ ಅಥವಾ ಮನೆಗಳ ಹಂಚಿಕೆ ಮಾಡಲು ಇರುವ ನಿಯಮಾವಳಿಗಳೇನು; (ವಿವರ ಒದಗಿಸುವುದು)	ಕರ್ನಾಟಕ ಗೃಹ ಮಂಡಳಿಯಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962, ಹಂಚಿಕೆ ರೆಗ್ಯುಲೇಶನ್ಸ್ 1983ರ ನಿಯಮ 9 ರಂತೆ ವಿವಿಧ ಪ್ರವರ್ಗಗಳಿಗೆ ಕಾಯ್ದಿರಿಸಿ ಹಂಚಿಕೆ ಮಾಡಲಾಗುತ್ತದೆ. ಪ್ರತಿ ಬಡಾವಣೆಯಲ್ಲಿ ಒಟ್ಟು ನಿವೇಶನಗಳ ಶೇ. 15 ರಿಂದ 20 ರಷ್ಟು ನಿವೇಶನಗಳನ್ನು ಆರ್ಥಿಕ ದುರ್ಬಲ ವರ್ಗದವರಿಗೆ ಅಭಿವೃದ್ಧಿಪಡಿಸಲಾಗುತ್ತಿದ್ದು, ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಆರ್ಥಿಕ ದುರ್ಬಲ ವರ್ಗದ ನಿವೇಶನಗಳಿಗೆ ಅರ್ಜಿ ಸಲ್ಲಿಸುವ ಅರ್ಜಿದಾರರು ತಮ್ಮ ಕುಟುಂಬದ ವಾರ್ಷಿಕ ವರಮಾನ ನಗರ ವ್ಯಾಪ್ತಿಯಲ್ಲಿದ್ದಲ್ಲಿ ರೂ.87,600/- ಹಾಗೂ ಗ್ರಾಮೀಣ ವ್ಯಾಪ್ತಿಯಲ್ಲಿದ್ದಲ್ಲಿ ರೂ.32,000/- ಮೀರದಿರುವ ಬಗ್ಗೆ ಸಂಬಂದಪಟ್ಟ ತಹಸೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಸಲ್ಲಿಸಿದಲ್ಲಿ ನಿಯಮಾನುಸಾರ ಹಂಚಿಕೆಗೆ ಕ್ರಮ ವಹಿಸಲಾಗುತ್ತಿದೆ. ಹಂಚಿಕೆಯಾದ ಸದರಿ ನಿವೇಶನಗಳನ್ನು 5 ವರ್ಷಗಳವರೆಗೆ ಪರಭಾರೆ ಅಥವಾ ವರ್ಗಾವಣೆ ಮಾಡುವಂತಿಲ್ಲ.
ಆ	ಕಳೆದ 5 ವರ್ಷಗಳಲ್ಲಿ ಧಾರವಾಡ ಮತ್ತು ಹುಬ್ಬಳ್ಳಿ ಅವಳಿ ನಗರಗಳಲ್ಲಿ ಗೃಹ ಮಂಡಳಿಯಿಂದ ದುರ್ಬಲ ವರ್ಗದವರಿಗೆ ನಿವೇಶನ ಅಥವಾ ಮನೆಗಳನ್ನು ಹಂಚಿಕೆ ಮಾಡಲಾಗಿದೆಯೇ;	ಹೌದು; 1) ಹುಬ್ಬಳ್ಳಿ ತಾಲ್ಲೂಕಿನ ಅಮರಗೋಳ 2ನೇ ಹಂತದ ಬಡಾವಣೆಯಲ್ಲಿ 16 ನಿವೇಶನಗಳನ್ನು ಹಾಗೂ ಗಾಮನಗಟ್ಟಿ 2ನೇ ಹಂತದ ಬಡಾವಣೆಯಲ್ಲಿ 03 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

		2) ಧಾರವಾಡ ತಾಲ್ಲೂಕಿನ ಹಿರೇಮಲ್ಲಿಗೆವಾಡ ಬಡಾವಣೆಯಲ್ಲಿ 321 ನಿವೇಶನಗಳನ್ನು ಹಾಗೂ ಸತ್ತೂರು 2ನೇ ಹಂತದ ಬಡಾವಣೆಯಲ್ಲಿ 11 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
ಇ	ಮುಂದಿನ ದಿನಗಳಲ್ಲಿ ಸದರಿ ನಗರದ ದುರ್ಬಲ ವರ್ಗದವರಿಗೆ ಮನೆ ಅಥವಾ ನಿವೇಶನಗಳನ್ನು ಬೇಡಿಕೆ ಅನುಸಾರ ಹಂಚಿಕೆ ಮಾಡುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ? (ಸಂಪೂರ್ಣವಾದ ವಿವರವನ್ನು ನೀಡುವುದು).	ಹುಬ್ಬಳ್ಳಿ ತಾಲ್ಲೂಕಿನ ಗಾಮನಗಟ್ಟಿ 3ನೇ ಹಂತ ಮತ್ತು ಧಾರವಾಡ ತಾಲ್ಲೂಕಿನ ಸತ್ತೂರು 3ನೇ ಹಂತದ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸದರಿ ಬಡಾವಣೆಗಳಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ನಿಯಮಾವಳಿಯಂತೆ ನಿವೇಶನ ಹಂಚಿಕೆಗೆ ಕ್ರಮ ಜರುಗಿಸಲಾಗುವುದು.

(ಸಂಖ್ಯೆ: ವಇ 31 ಕಗೃಮಂ 2021)

(ವಿ. ಸೋಮಣ್ಣ)
ವಸತಿ ಸಚಿವರು.